ಕುಮಾರ ಚಲವಾದಿ, ಹೊಳೆನರಸಿಪುರ

*ಸಾವಿನ ಆಚೆಗೆ ಏನಿರಬಹುದು ಗುರುಗಳೆ?*



ಮಡಕೆ, ಶವಪೆಟ್ಟಿಗೆ, ಹೂಗುಚ್ಛ, ಗೋರಿಕಲ್ಲು, ಇತ್ಯಾದಿಗಳಲ್ಲಿ ನಿರತರ ಬದುಕು.

ವಿ.ಹಮೀದ್, ವಿಟ್ಲ

*ನಕ್ಕಾಗ ಒಬ್ಬಾಕೆ ಕೆನ್ನೆಗೆ ಬಾರಿಸಿದ್ದಾಳೆ. ಕಾರಣ?*

ಛೆ! ತಿಳಿದುಕೊಳ್ಳದೆ ಬರಬಾರದಿತ್ತು. ಮರಳಿ ಯತ್ನವ ಮಾಡು ಮನುಜ, ಕಾರಣ ತಿಳಿವ ತನಕ.

ಅಮರಯ್ಯಾ ಪತ್ರಿಮಠ, ಸುರಪೂರ

*ನಮ್ಮ ಜೀವನದ ಯಶಸ್ಸಿನ ಕೀಲಿಕೈ ಯಾವುದು?*

ಶ್ರೀಮಂತ ಬೀಗ.

ಮಂಜುನಾಥ ಎನ್., ಬೆಂಗಳೂರು

*ಶ್ಮಶಾನದಲ್ಲಿ ಗೋರಿಯ ಮೇಲೆ 'ಮೇಲಕ್ಕೆ ದಾರಿ' ಎಂದಿದೆಯಲ್ಲ ರಾಮಣ್ಣ?*

ಓಹ್! ಥ್ಯಾಂಕ್ಸ್. ಪಕ್ಕದ ನರ್ಸಿಂಗ್ ಹೋಂನವರು ಕಳೆದುಹೋಯಿತೆಂದು ಹುಡುಕುತ್ತಿದ್ದ ಬೋರ್ಡ್ ಅದು!

ಮಲ್ಲನಗೌಡ ಪಾಟೀಲ, ರಾಮದುರ್ಗ

*ಅತಿಯಾದ ಕೋಪ ಬಂದಾಗ ತಾಳ್ಮೆಯಿಂದಿರಲು ಏನು ಮಾಡಬೇಕು?*




ನಿಮಗಿಂತ ಬಲಿಷ್ಠ ಹಾಗೂ ಕೋಪಿಷ್ಠರ ಮುಂದೆ ನಿಂತರಾಯ್ತು.

ರತ್ನಜ, ಮೈಸೂರು

*ಸತ್ತವರ ಮೂಗಿನ ಹೊಳ್ಳೆಗಳಿಗೆ ಹತ್ತಿ ತುಂಬುವುದರ ಕಾರಣವೇನು ರಾಂಜಿ?*

ವೈದ್ಯರ ತಪ್ಪಿನಿಂದ ಅಪ್ಪಿತಪ್ಪಿ ಉಸಿರಾಡಿಬಿಟ್ಟಾರೆಂದು ಮುನ್ನೆಚ್ಚರಿಕೆ!

ಆರ್. ಮಧುಸೂದನ್, ಹಾಸನ

*ಒಂದು ವೇಳೆ ಗಾಂಧಾರಿ ಕಣ್ಣಿಗೆ ಬಟ್ಟೆ ಕಟ್ಟಿಕೊಳ್ಳದೇ ಇದ್ದಿದ್ದರೆ ದುರ್ಯೋಧನನ ಸಾವನ್ನು ತಡೆಯಲು ಸಾಧ್ಯವಿತ್ತೆ?*

ಊಹೂಂ; ನೈಜವಾಗಿ ಅಂಧರಾದವರನ್ನು ಉಳಿಸಬಹುದು; ಅಹಂಕಾರದಿಂದ ಅಂಧರಾದವರನ್ನು ಉಳಿಸಲು ಸಾಧ್ಯವಿಲ್ಲ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

*ಕುವೆಂಪು 'ಎಲ್ಲಿಯೂ ನಿಲ್ಲದಿರು, ಮನೆಯನೆಂದು ಕಟ್ಟದಿರು, ಕೊನೆಯನೆಂದು ಮುಟ್ಟದಿರು' ಎಂದುದರ ಅರ್ಥವೇನು?*

'ಆಫೀಸ್ ಬಿಟ್ಟ ತಕ್ಷಣ ಮನೆಗೆ ಬಾ, ಫ್ಲ್ಯಾಟ್ ಖರೀದಿಸು, ಟೆರೇಸ್‌ನ ತುದಿಗೆ ಹೋಗಿ ನಿಲ್ಲಬೇಡ' ಎಂದಿರಬಹುದೋ ಏನೋ...

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಹೆಣ್ಣಿಗೂ, ಬೆಂಕಿಪೊಟ್ಟಣಕ್ಕೂ ಏನು ವ್ಯತ್ಯಾಸ?*

ನೀರೆ ನೀರಿನಲ್ಲೂ ಬೆಳಗುತ್ತಾಳೆ.

ಪಿ. ಗೋವಿಂದರಾಜ್, ಶಿವಮೊಗ್ಗ

*ಸಹವಾಸದಿಂದ ಸನ್ಯಾಸಿ ಕೆಟ್ಟನಂತೆ. ಹಾಗಾದರೆ ಸಂಸಾರಿ ಯಾರಿಂದ ಕೆಟ್ಟ?*

ಗೃಹವಾಸದಿಂದ! ಆಲಸ್ಯಕ್ಕಿಂತ ದೊಡ್ಡ ಅನರ್ಥವಿಲ್ಲ.

ಪಿ.ಜೆ. ರಾಘವೇಂದ್ರ, ಮೈಸೂರು

*ವೈದ್ಯರದು ಕೈಗುಣ, ಸೊಸೆಯದು ಕಾಲ್ಗುಣ; ಉಳಿದವರಾರಿಗೂ ಯಾವುದೇ ಗುಣಗಳಿಲ್ಲವೆ?*

ಇವೆ. ವಾದ್ಯಗಾರರದು ಸದ್‌ಗುಣ; ವಿರೋಧಪಕ್ಷದ್ದು ದೂರ್‌ಗುಣ; ಸಹೋದರರದು ಪಾಲ್‌ಗುಣ.....

ಎಂ.ಜಿ. ಉಮಾ, ಬಳ್ಳಾರಿ

*ಸಾಲುಮರದ ತಿಮ್ಮಕ್ಕನಿಗೂ, ಒನಕೆ ಓಬವ್ವನಿಗೂ ಏನು ವ್ಯತ್ಯಾಸ?*

ಓಬವ್ವನಿಂದ ಮದಕರಿಗೆ ಆಸರೆ; ತಿಮ್ಮಕ್ಕನಿಂದ ಮುದುಕರಿಗೆ ಆಸರೆ!

ಎಂ.ಎನ್. ಸೋಮಶೇಖರ್, ಮೈಸೂರು

*ಶಿವನು ತನ್ನ ಜಟೆಯಲ್ಲಿ ಗಂಗೆ, ಚಂದ್ರ ಮತ್ತು ಹಾವನ್ನು ಧರಿಸಿರಲು ಕಾರಣವೇನು?*

ಬೆಟ್ಟದ್ಮೇಲೆ ನೀರಿಗ್ತೊಂದ್ರೆ ಇರೋದ್ರಿಂದ ಸ್ಟೋರೇಜು; ತಲೆಬಿಸಿಯಿಂದ ನೀರು ಬಿಸಿಯಾಗ್ದೇಯಿರಕ್ಕೆ ಚಂದ್ರ. ನೀರಿನ ಕಾವಲಿಗೆ ಹಾವು!

ಬಿ. ಶ್ರೀನಾಥ, ಮೈಸೂರು

*cash ಇಲ್ಲದವನು ash. cash ಇದ್ದೋವ್ನು?*

**Rash, Crash!**

## ಬಹುಮಾನಿತ ಪ್ರಶ್ನೆ

ಐ.ಯಂ. ಜಲಜಾಕ್ಷಿ, ಮಡಿಕೇರಿ

*ಬೈ ಚಾನ್ಸ್ ದ್ರೌಪದಿ ನೂರು ಕೌರವರನ್ನು ಮದುವೆಯಾಗಿದ್ದಿದ್ದರೆ ಮಹಾಭಾರತದ ಕಥೆ ಯಾವ ತಿರುವು ಪಡೆಯುತ್ತಿತ್ತು?*

ಒಂದು ಗಂಡನಿಗೆ 100 ಮಕ್ಕಳ ಲೆಕ್ಕದಲ್ಲಿ ದ್ರೌಪದಿಗೆ 10000 ಮಕ್ಕಳಾಗಿ ಇಡೀ ಹಸ್ತಿನಾಪುರ ಹೆರಿಗೆ ಆಸ್ಪತ್ರೆಯಾಗುತ್ತಿತ್ತು!

ಪದ್ಮ ಪೂವಯ್ಯ, ಬೆಂಗಳೂರು

*ಲಬೋ ಲಬೋಗೂ, ಲಬ್‌ಡಬ್‌ಗೂ ಇರುವ ವ್ಯತ್ಯಾಸವೇನು?*

ಉಸಿರು! ಉಸಿರು ಇದ್ದಾಗ ಲಬ್‌ಡಬ್; ನಿಂತಾಗ ಲಬೋ ಲಬೋ!

ಬೋ.ಪಾ. ವೆಂಕಟೇಶ್, ಸಮೇತನಹಳ್ಳಿ

*ಸಾಷ್ಟಾಂಗ ನಮಸ್ಕಾರ ಮಾಡುವವರನ್ನು ಏನೆನ್ನಬಹುದು?*



ಅಮ್ಮಾ ಪಕ್ಷದ ಮಂತ್ರಿಗಳು.

ಬೆಳ್ಳಾವೆ, ಬೆಂಗಳೂರು

*ಒಡಹುಟ್ಟಿದವರ ಪ್ರೀತಿ ಎಲ್ಲಿಯವರೆಗೆ?*

ಒಡಕು ಹುಟ್ಟುವವರೆಗೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

*ನಾವು ಉಸಿರಾಡುವ ಗಾಳಿಗೂ ಟ್ಯಾಕ್ಸ್ ಇದ್ದಿದ್ದರೆ ಏನಾಗುತ್ತಿತ್ತು ಸಾರ್?*

ಕಪ್ಪುಹಣ ಇರುವಂತೆ ಕಪ್ಪುಗಾಳಿಯನ್ನು ಕಂಡುಹಿಡಿಯಲಾಗುತ್ತಿತ್ತು.

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

*ಹಾವಿನ ಹೆಡೆಗೂ, ಹೆಣ್ಣಿನ ಜಡೆಗೂ ಇರುವ ವ್ಯತ್ಯಾಸವೇನು?*

ಹಾವಿನ ಹೆಡೆ ದೂರದ ಗುಹೆಯಲ್ಲಿ ನಿಧಿ ಕಾಯುತ್ತದೆ; ಹೆಣ್ಣಿನ ಜಡೆ ಬ್ಯೂಟಿ ಪಾರ್ಲರ್‌ನಲ್ಲಿ ನಿಧಿ ಕರಗಿಸುತ್ತದೆ.

ಡಿ.ಎಸ್. ಪಂಕಜಸುಬ್ರಮಣ್ಯಂ, ಬೆಂಗಳೂರು

*ನಿಮ್ಮ ಉತ್ತರಗಳನ್ನು ಓದಿ ಓದಿ ನಿಮ್ಮನ್ನು ಕಾಣುವಾಸೆ. ಏನು ಮಾಡಲಿ...?*

ಭ್ರಮನಿರಸನವಾದೀತು. ರೇಡಿಯೋ ನೋಡುವುದಕ್ಕಿಂತ ಕೇಳುವುದೇ ಸೂಕ್ತ.

■ ರಾಮ್